# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1075
ಉತ್ತರಿಸಬೇಕಾದ ದಿನಾಂಕ : 28.12.2022
ಸದಸ್ಯರ ಹೆಸರು : ಶ್ರೀ. ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರವು ಪಹಣಿ ಪತ್ರಗಳಲ್ಲಿ ಬೆಳೆ ವಿವರಗಳನ್ನು ದಾಖಲಿಸ ಲಾಗುತ್ತಿದೆಯೇ; ಬೆಳೆ ವಿವರಗಳ ದಾಖಲೆ ಊರ್ಜಿತಾವಧಿ ಎಷ್ಟು; (ವಿವರ ನೀಡುವುದು); | ಹೌದು<br>ಬೆಳೆ-ಸಮೀಕ್ಷೆ ಯೋಜನೆಯ (Crop-Survey) ಮೂಲಕ ಸ್ವೀಕೃತವಾಗುವ ಆಯಾ ಋತುಮಾನದ ಬೆಳೆ ವಿವರಗಳನ್ನು ಪಹಣಿ ಪತ್ರಗಳಲ್ಲಿ ದಾಖಲಿಸಲಾಗುತ್ತಿದೆ.<br>ಪತ್ರ ಸಂಖ್ಯೆ: ಸಿಆಸುಇ (ಇ-ಆ) 100 ಅಮುಕ 2021 ದಿನಾಂಕ:17-03-2021ರಲ್ಲಿ ಯಾವುದೇ ರೀತಿಯ ಬೆಳೆ ಮಾಹಿತಿಯಲ್ಲಿ ಬದಲಾವಣೆ ಅಗತ್ಯವಿದ್ದಲ್ಲಿ ಅದನ್ನು ಬೆಳೆ ಸಮೀಕ್ಷೆ ವ್ಯವಸ್ಥೆಯಲ್ಲಿ ಸರಿಪಡಿಸಿ ನಂತರ ಭೂಮಿ ತಂತ್ರಾಂಶಕ್ಕೆ ವರ್ಗಾಯಿಸಿ, ಇಂಡೀಕರಿಸಲು ತಿಳಿಸಲಾಗಿದೆ. ಆದುದರಿಂದ ಬೆಳೆ-ಸಮೀಕ್ಷೆ ತಂತ್ರಾಂಶದ ಮೂಲಕ ಸ್ವೀಕೃತವಾಗುವ ಬೆಳೆ ವಿವರಗಳನ್ನು ಮಾತ್ರ ಪಹಣಿ ಪತ್ರಗಳಲ್ಲಿ ದಾಖಲಿಸಲಾಗುತ್ತಿದೆ. |
| ಆ | ಪಹಣಿ ಪತ್ರಗಳಲ್ಲಿ ಬೆಳೆ ವಿವರಗಳನ್ನು ದಾಖಲಿಸುವ ಮಾನದಂಡಗಳೇನು; ರಾಜ್ಯದಲ್ಲಿ ಯಾರು ಬೆಳೆ ವಿವರ ಗಳನ್ನು ದಾಖಲಿಸುತ್ತಿದ್ದಾರೆ; (ವಿವರ ನೀಡುವುದು) | |
| ಇ | ಅಲ್ಪಾವಧಿ ಮತ್ತು ದೀರ್ಘಾವಧಿ ಬೆಳೆಗಳಿಗೆ ಬೆಳೆವಿವರ ವರದಿಗೆ 6 ತಿಂಗಳು ಮಾತ್ರ ಮಾನ್ಯತೆ ನೀಡಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | 2020ನೇ ಸಾಲಿನಿಂದ ಹಿಂದಿನ ಋತುಮಾನ ದಲ್ಲಿ ನಮೂದಿಸಿರುವ ಅಲ್ಪಾವಧಿ ಮತ್ತು ದೀರ್ಘಾವಧಿ ಬೆಳೆಗಳನ್ನು ಮುಂದುವರಿಸಿ ಕೊಂಡು ಹೋಗುವಂತೆ ತಂತ್ರಾಂಶದಲ್ಲಿ ಬದಲಾವಣೆ ಮಾಡಲಾಗಿದೆ. ಇದರಿಂದ ರೈತರಿಗೆ ಯಾವುದೇ ತೊಂದರೆಯಾಗುತ್ತಿಲ್ಲ. |
| ಈ | ಧೀರ್ಘಾವಧಿ ತೋಟಗಾರಿಕೆ ಬೆಳೆಗಳಾದ ಅಡಿಕೆ, ತೆಂಗು, ಬೆಳೆವಿವರ ವರದಿಯ ಊರ್ಜಿತಾವಧಿಯನ್ನು ಕನಿಷ್ಠ 2 ವರ್ಷಗಳ ಅವಧಿಗೆ ವಿಸ್ತರಿಸಿದರೆ ರೈತರಿಗೆ ಉಪಯೋಗ ವಾಗುವ ಕುರಿತು ಸರ್ಕಾರ ಯೋಚಿಸಿದೆಯೇ: ಈ ಕುರಿತು ಪಹಣಿ ಪತ್ರಗಳಲ್ಲಿ ಬೆಳೆ ನಮೂದು ಊರ್ಜಿತಾವಧಿ ವಿಸ್ತರಿಸಬಹುದಲ್ಲವೇ; ಈ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು). | ಬೆಳೆ ಸಮೀಕ್ಷೆ ತಂತ್ರಾಂಶದ ಮೂಲಕ ಸ್ವೀಕೃತವಾದ. ಮಾಹಿತಿಯಲ್ಲಿ ದೀರ್ಘಾವಧಿ ಬೆಳೆಗಳನ್ನು ತಿದ್ದುಪಡಿ ಮಾಡಿದಲ್ಲಿ ಮಾತ್ರ ಪಹಣಿಯಲ್ಲಿ ಅಳವಡಿಸಲಾಗುತ್ತದೆ. ಇಲ್ಲದಿದ್ದಲ್ಲಿ ಹಿಂದಿನ ಋತುಮಾನದಲ್ಲಿ ನಮೂದಿಸಿರುವ ಬೆಳೆಯ ವಿವರಗಳು ಮುಂದುವರೆಯುತ್ತದೆ. |

ಕಂಇ 393 ಎಂಆರ್ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು